## 2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 35/2022

ಪಿ.ಡಬ್ಲುಃ 7 ಸಿಡಬ್ಲುಃ13

| | | |
|---|---|---|
| ಸಾಕ್ಷಿಯ ಹೆಸರು | : | ಕೆ.ಕೃಷ್ಣ |
| ತಂದೆಯ ಹೆಸರು | : | ತಿಮ್ಮಪ್ಪ |
| ವಯಸ್ಸು | : | 53 ವರ್ಷ |
| ವೃತ್ತಿ | : | ಹಮಾಲಿ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 03.07.2025.

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

(ಸಾಕ್ಷಿ ತನಗೆ ಕನ್ನಡ ಭಾಷೆ ಮಾತನಾಡಲು ಬರುವುದಿಲ್ಲ ಎಂದು ಹೇಳಿದ್ದರಿಂದ ಶ್ರೀ ಟಿ.ಕೆ.ಕೆ ವಕೀಲರನ್ನು ಭಾಷಾಂತರ ಕಾರರನ್ನಾಗಿ ನೇಮಿಸಲಾಯಿತು. ಭಾಷಾಂತರಕಾರರ ಮೂಲಕ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು.)

ನನಗೆ ಚಾಸಾ-1 ಹಾಗೂ 5 ಇವರ ಪರಿಚಯ ಇದೆ. ಅವರಿಬ್ಬರು ನನ್ನ ಚಿಕ್ಕಪ್ಪನ ಮಕ್ಕಳು -ತಮ್ಮಂದಿರು. ನನ್ನ ಚಿಕ್ಕಪ್ಪನ ಹೆಸರು ರಾಜು. ಶ್ರಾವಂತಿ ಇವಳು ನನ್ನ ತಂಗಿ(ಚಿಕ್ಕಪ್ಪನ ಮಗಳು). ಚಾಸಾ-14 ಇವಳು ನನ್ನ ಹೆಂಡತಿ. ಹಾಜರಿರುವ 1 ರಿಂದ 8 ನೇ ಆರೋಪಿತರ ಪರಿಚಯ ಇದೆ. 1 ನೇ ಆರೋಪಿ ಇವನು ಶ್ರಾವಂತಿ ಇವಳ ಗಂಡ. ಉಳಿದ ಆರೋಪಿತರು ಅವರ ಸಹೋದರ ಸಹೋದರಿಯರು. ಅವರೆಲ್ಲರೂ ರೂಪನಗುಡಿ ರಸ್ತೆ ಬಳ್ಳಾರಿಯಲ್ಲಿ ವಾಸಿಸುತ್ತಾರೆ. 1 ನೇ ಆರೋಪಿ ಹಾಗೂ ಶ್ರಾವಂತಿ ಇವರ ಮದುವೆ 2020 ರಲ್ಲಿ ಅನಂತಪುರ ರಸ್ತೆ ಯಲ್ಲಿರುವ, ಸೂರ್ಯ ಭವನ ಕಲ್ಯಾಣ ಮಂಟಪ, ಬಳ್ಳಾರಿಯಲ್ಲಿ ಆಗಿರುತ್ತದೆ. ಮದುವೆಯ ಮಾತುಕತೆ ಆಗಿದ್ದು ಗೊತ್ತಿರುತ್ತದೆ. ಮದುವೆಯ ಮಾತುಕತೆಯಲ್ಲಿ 2 ಲಕ್ಷ ರೂ.

ನಗದು ಹಣ, 8 ತೊಲೆ ಬಂಗಾರ ಕೊಡಬೇಕೆಂದು ಆಗಿರುತ್ತದೆ. ಮದುಮಗನಿಗೆ ಚೈನು ಹಾಗೂ ಉಂಗುರ ಕೊಡಬೇಕೆಂದು ಮಾತುಕತೆ ಆಗಿರುತ್ತದೆ. ಮದುವೆ ಮಾತುಕತೆಯಾದಾಗ ಚಾಸಾ-15, 16 ಹಾಗೂ ಅವರ ಸ್ನೇಹಿತರು ಹಾಜರಿದ್ದರು. ಮದುವೆಯ ಹತ್ತು ದಿವಸಕ್ಕಿಂತ ಮೊದಲು 1 ನೇ ಆರೋಪಿತನಿಗೆ 2 ಲಕ್ಷ ರೂ. ಹಣ ನೀಡಲಾಗಿತ್ತು. ಬಂಗಾರದ ಸಾಮಾನುಗಳನ್ನು ಮದುವೆಯ ದಿನ ನೀಡಲಾಗಿತ್ತು.

1 ನೇ ಆರೋಪಿ ಹಾಗೂ ಶ್ರಾವಂತಿ ಮದುವೆಯಾದ 8 ತಿಂಗಳವರೆಗು ಚೆನ್ನಾಗಿ ಇದ್ದರು. ನಂತರ ಸಣ್ಣ ಪುಟ್ಟ ಜಗಳಗಳು ಹಣಕಾಸಿನ ವಿಷಯವಾಗಿ ಪ್ರಾರಂಭವಾದವು. 1 ನೇ ಆರೋಪಿ ತನಗೆ ಹಣಕಾಸಿನ ವ್ಯವಹಾರ ಮಾಡುವ ಸಲುವಾಗಿ ರೂ.10 ಲಕ್ಷ ಹಣ ಬೇಕು ಎಂದು ಶ್ರಾವಂತಿಗೆ ಕೇಳುತ್ತಿದ್ದ. ಈ ವಿಷಯವಾಗಿ ಚಾಸಾ-1 ಇವರು ಆರೋಪಿತರಿಗೆ ಬುದ್ದಿವಾದ ಹೇಳಿ ಬಂದಿದ್ದರು. ಸ್ವಲ್ಪ ದಿವಸಗಳ ನಂತರ ಆರೂಪಿತರು ಶ್ರಾವಂತಿ ಇವಳ ಜೊತೆಗೆ ದುಡ್ಡಿಗಾಗಿ ಜಗಳ ಪ್ರಾರಂಭಿಸಿದರು. ಈ ಜಗಳದ ವಿಷಯವಾಗಿ ಚಾಸಾ-1 ಇವರು ನನಗೆ ಹೇಳುತ್ತಿದ್ದರು. ಚಾಸಾ-1 ಇವರು ಹೋಗಿ ಬುದ್ದಿವಾದ ಹೇಳಿ ಬಂದ ವಿಷಯ ಗೊತ್ತಾಯಿತು. ನಂತರ 3-4 ವರ್ಷಗಳ ಹಿಂದೆ ಶ್ರಾವಂತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ವಿಷಯ ಗೊತ್ತಾಯಿತು. 1 ನೇ ಆರೋಪಿತನ ಮನೆಯಲ್ಲಿಯೇ ಶ್ರಾವಂತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಈ ವಿಷಯವನ್ನು ಚಾಸಾ-1 ಇವರು ನನಗೆ ತಿಳಿಸಿರುತ್ತಾರೆ. ನಾನು ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಈ ವಿಷಯ ಗೊತ್ತಾಯಿತು. ನಂತರ ನಾನು 1 ನೇ ಆರೋಪಿತನ ಮನೆಗೆ ಹೋದೆ. ಅಲ್ಲಿಂದ ಶ್ರಾವಂತಿ ಇವಳ ಶವವನ್ನು ಜಿಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ಗೊತ್ತಾಯಿತು. ಸದರಿ ಆಸ್ಪತ್ರೆಯಲ್ಲಿ ವೈದ್ಯರು ಬಂದು ನೋಡಿ ಶ್ರಾವಂತಿ ಮರಣ ಹೊಂದಿರುತ್ತಾರೆ ಎಂದು ಹೇಳಿದರು. ಅಲ್ಲಿಂದ ಅವಳ ಶವವನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಯಿತು. ನಂತರ ಶವವನ್ನು ಶವಾಗಾರದಲ್ಲಿ ಇಟ್ಟರು. ಶ್ರಾವಂತಿ ಇವಳು ಆತ್ಮಹತ್ಯೆ ಮಾಡಿಕೊಳ್ಳಲು 1 ನೇ ಆರೋಪಿತನೇ ಹಣ ಕೇಳಿದ್ದು ಕಾರಣವಾಗಿರುತ್ತದೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ-</u>**

**ದಿನಾಂಕ 30.11.2021 ಕ್ಕೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. 1 ನೆ ಆರೋಪಿ ಹಾಗೂ ಅವರ ಸಹೋದರ ಸಹೋದರಿ ಶ್ರಾವಂತಿ ಇವಳಿಗೆ ವರದಕ್ಷಿಣೆ ವಿಷಯವಾಗಿ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರಿಂದ ನಾನು, ಚಾಸಾ-14 ರಿಂದ 16 ಎಲ್ಲರೂ ಸೇರಿ 1 ನೇ ಆರೋಪಿತನ ಮನೆಯಲ್ಲಿ ಹಾಗೂ ಚಾಸಾ-1 ಇವರ ಮನೆಯಲ್ಲಿ ಪಂಚಾಯಿತಿ ಮಾಡಿ ಆರೋಪಿತರಿಗೆ ಶ್ರಾವಂತಿಯನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಬುದ್ದಿವಾದ ಹೇಳಿದ್ದೆವು ಎಂದರೆ ಸರಿ. ಅದಾದರು ಕೂಡ 1 ರಿಂದ 8 ನೇ ಆರೋಪಿತರು ಇವರು ಶ್ರಾವಂತಿ ಇವಳಿಗೆ ಇನ್ನೂ ಹೆಚ್ಚಿನ ವರದಕ್ಷಿಣೆ ತರುವಂತೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದಾರೆ ಎಂದು ತಿಳಿಸಿದ್ದಳು ಎಂದರೆ ಸರಿ.**

**ಶ್ರಾವಂತಿಯ ದೇಹವನ್ನು ವಿಮ್ಸ್ ಆಸ್ಪತ್ರೆಗೆ ತೆಗೆದುಕೊಂಡು ಹೋದ ನಂತರ ಈ ಘಟನೆಯ ಬಗ್ಗೆ ಚಾಸಾ-1 ಇವರಿಗೆ ವಿಚಾರಿಸಿದಾಗ, ಚಾಸಾ-1 ಇವರು ಮಧ್ಯಾಹ್ನ 3.00 ಗಂಟೆಗೆ 1 ನೇ ಆರೋಪಿ ತನಗೆ ಫೋನ್ ಮಾಡಿ ನಿನ್ನ ತಂಗಿಯನ್ನು ಕರೆದುಕೊಂಡು ಬಾ ಎಂದು ತಿಳಿಸಿದ್ದರಿಂದ, ನಾನು ಅವರ ಮನೆಯ ಹತ್ತಿರ ಹೋಗಿ ನೋಡಲು ಅಲ್ಲಿ 1 ನೇ ಆರೋಪಿ 2 ರಿಂದ 6 ನೇ ಆರೋಪಿತರು ನನ್ನ ತಂಗಿಯನ್ನು ಮೂಲೆಯಲ್ಲಿ ಕೂಡಿ ಹಾಕಿದ್ದು, ನನ್ನ ತಂಗಿ ನನ್ನ ಹತ್ತಿರ ಬಂದು, 1 ರಿಂದ 6 ನೇ ಆರೋಪಿತತರು ತವರು ಮನೆಯಿಂದ**

ರೂ.10 ಲಕ್ಷ ವರದಕ್ಷಿಣೆ ಹಣ ತರಬೇಕೆಂದು ಒತ್ತಾಯಿಸಿ ಮುಂಜಾನೆಯಿಂದ ತನಗೆ ಅನ್ನ, ನೀರು ಕೊಡದೆ, ಮಗುವಿಗೆ ಹಾಲು ಕೊಡಲು ಬಿಡದೆ ಚಿತ್ರ ಹಿಂಸೆ ನೀಡುತ್ತಿದ್ದಾರೆ ಎಂದು ತಿಳಿಸಿದಳು, ನಂತರ ಚಾಸಾ-1 ಇವರು 1 ನೇ ಆರೋಪಿಗೆ ಹಣ ಜೋಡಿಸಿಕೊಂಡು ಬಂದು ಶ್ರಾವಂತಿ ಇವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತೇನೆಂದು ತಿಳಿಸಿ, ಹಣ ಜೋಡಿಸಲು ಅಲೆದಾಡುತ್ತಿದ್ದಾಗ ಸಂಜೆ 04.53 ಗಂಟೆಗೆ 1 ನೇ ಆರೋಪಿ ಚಾಸಾ-1 ಇವರಿಗೆ ಫೋನ್ ಮಾಡಿ ನಿನ್ನ ತಂಗಿ ನೇಣು ಹಾಕಿಕೊಂಡಿದ್ದಾಳೆ ಬಾ ಎಂದು ತಿಳಿಸಿದ್ದ ಎಂದು ಚಾಸಾ-1 ಇವರು ನನಗೆ ಹೇಳಿದರು ಎಂದರೆ ಸರಿ.

ನಂತರ ನಾನು ಹಾಗೂ ಚಾಸಾ-1 ಕೂಡಿ ಚಾಸಾ-11 ಇವರಿಗೆ ಏನಾಯಿತು ಎಂದು ವಿಚಾರಿಸಿದಾಗ ಅದಕ್ಕೆ ಚಾಸಾ-1 ಇವರು ಸಂಜೆ 04.40 ಗಂಟೆಗೆ ಮನೆಯ ಹತ್ತಿರ ಇದ್ದಾಗ 1 ನೇ ಆರೋಪಿತನ ಅಕ್ಕ ಲಕ್ಷ್ಮಿ ಇವಳು ಜೋರಾಗಿ ಕಿರುಚಾಡುತ್ತಿದ್ದಾಗ ನಾನು, 1 ನೇ ಆರೋಪಿಯ ಮನೆಗೆ ಹೋಗಿ ನೋಡಲು, ಮನೆಯ ಬಾಗಿಲಿಗೆ ಹಿಂದಿನಿಂದ ಚಿಲಕ ಹಾಕಿದ್ಧು ಶ್ರಾವಂತಿ ಇವಳ ಮಗು ಮನೆಯ ಒಳಗಡೆ ಅಳುತ್ತಿದ್ದು, ನಾನು ಬಾಗಿಲನ್ನು ಕಾಲಿನಿಂದ ಒದ್ದು ಮನೆಯ ಒಳಗೆ ಹಾಲ್ ನಲ್ಲಿ ಹೋಗಿ ನೋಡಲಾಗಿ ಶ್ರಾವಂತಿಯು ಸೀರೆಯಿಂದ ಫ್ಯಾನ್‌ಗೆ ನೇಣು ಹಾಕಿಕೊಂಡಿದ್ದು ಅಷ್ಟರಲ್ಲಿ 1 ನೇ ಆರೋಪಿ ಸಹ ಮನೆಗೆ ಬಂದಿದ್ದರಿಂದ ತಾನೂ ಹಾಗೂ 1 ನೇ ಆರೋಪಿ ಸೇರಿ ಶ್ರಾವಂತಿ ಬದುಕಿರಬಹುದು ಎಂದು ಅವಳನ್ನು ಕೆಳಗಿಳಿಸಿ ಆಟೋ ರಿಕ್ಷಾದಲ್ಲಿ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ ಎಂದು ತಿಳಿಸಿದ್ದ ಎಂದು ಚಾಸಾ-1 ಇವರು ನನಗೆ ಹೇಳಿದರು ಎಂದರೆ ಸರಿ.

ಆರೋಪಿತರೆಲ್ಲರೂ ಮದುವೆ ಆದ 3 ತಿಂಗಳಿನಿಂದ ಶ್ರಾವಂತಿಗೆ ಇನ್ನೂ ಹೆಚ್ಚಿನ ವರದಕ್ಷಿಣೆ ಹಣ ತರುವಂತೆ ಮಾನಸಿಕ ಹಾಗೂ ದೈಹಿಕ ಚಿತ್ರ ಹಿಂಸೆ ನೀಡಿದ್ದರಿಂದ ದಿನಾಂಕ 21.11.2021 ರಂದು ಅವಳಿಗೆ ತವರು ಮನೆಯಿಂದ ರೂ.10 ಲಕ್ಷ ಹಣ ತರಬೇಕೆಂದು ಅನ್ನ ನೀರು ಕೊಡದೆ, ಮಗುವಿಗೆ ಹಾಲು ಕೊಡಲು ಸಹ ಬಿಡದೆ ಮನೆಯಲ್ಲಿ ಕೂಡಿ ಹಾಕಿ ಚಿತ್ರ ಹಿಂಸೆ ನೀಡಿದ್ದರಿಂದ ಶ್ರಾವಂತಿ ನೇಣು ಹಾಕಿಕೊಂಡಿದ್ದಾಳೆ ಎಂದರೆ ಅವಳು ಆತ್ಮಹತ್ಯೆ ಮಾಡಿಕೂಂಡಿಲ್ಲ ಆರೋಪಿತರು ಏನೋ ಮಾಡಿದ್ದಾರೆ ಎಂದು ಸಾಕ್ಷಿ ಉತ್ತರಿಸುತ್ತಾನೆ.

<u>ಪಾಟೀಸವಾಲು ಆರೋಪಿ ಪರ ಶ್ರೀ ಎಂ ಎ ಬಿ ವಕೀಲರಿಂದಃ</u>

ನನಗೆ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರೆಯುವುದಿಲ್ಲ. ಪೊಲೀಸರು ಏನೂ ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಬರೆದುಕೊಂಡ ವಿಷಯಗಳನ್ನು ಓದಿ ಹೇಳಿರುತ್ತಾರೆ. ನಾನು ಮತ್ತು ಚಾಸಾ-14 ಗಂಗಪ್ಪ ಜಿನ್ನದ ಸರ್ಕಲ್ ಹತ್ತಿರ ಬಾಡಿಗೆ ಮನೆಯಲ್ಲಿ ಇರುತ್ತೇವೆ ಎಂದರೆ ಸರಿ. ಚಾಸಾ-1 ಹಾಗೂ 5 ಮತ್ತು ನಾವು ಬೇರೆ ಬೇರೆ ಕಡೆ ಇರುತ್ತೇವೆ ಎಂದರೆ ಸರಿ. ಚಾಸಾ-1 ಹಾಗೂ 5 ಇವರ ಮನೆ ರಂಗಪ್ಪ ಬೀದಿ ಇಲ್ಲಿ ಇದೆ ಎಂದರೆ ಸರಿ. ಶ್ರಾವಂತಿಯ ಇವಳ ಮದುವೆಗಿಂತ ಮೊದಲು 1 ನೇ ಆರೋಪಿತನ ಕುಟುಂಬಕ್ಕೂ ಹಾಗೂ ನಮಗೂ ಯಾವುದೇ ರೀತಿಯ ಪರಿಚಯ ಇರಲಿಲ್ಲ. ಮದುವೆಯ ಸಂಬಂಧವನ್ನು ಚಾಸಾ-1 ಇವರ ಸ್ನೇಹಿತ ಮಾಡಿಸಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಶ್ರಾವಂತಿ ಇವಳ ಮದುವೆಯ ಆಗುವುದಕ್ಕಿಂತ ಮೊದಲೇ 7 ಹಾಗೂ 8 ನೇ ಆರೋಪಿತರ ಮದುವೆ ಆಗಿತ್ತು ಎಂದರೆ ಸರಿ. 7 ನೇ ಆರೋಪಿಯ ಗಂಡನ ಮನೆ ಆಂದ್ರಪ್ರದೇಶದ ಓಬಳಾಪುರಂ ಎಂದರೆ ಸರಿ. 7 ನೇ ಆರೂಪಿ ತನ್ನ ಗಂಡ ಮತ್ತು ಮಕ್ಕಳ ಜೊತೆ ಓಬಳಾಪುರಂದಲ್ಲಿ ಇರುತ್ತಾರೆ ಎಂದರೆ ಸರಿ. ಶ್ರಾವಂತಿ ಹಾಗೂ 7 ನೇ ಆರೋಪಿಯ ನಡುವೆ ಬಾಂಧವ್ಯ ಚೆನ್ನಾಗಿತ್ತು ಎಂದರೆ ಸರಿ. ಶ್ರಾವಂತಿ ಹಾಗೂ 8 ನೇ ಆರೋಪಿಯ ನಡುವೆ ಬಾಂಧವ್ಯ ಚೆನ್ನಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಮದುವೆ ಆದ ಎಂಟು ತಿಂಗಳ ನಂತರ ಸಂಬಂಧ ಚನ್ನಾಗಿ ಇರಲಿಲ್ಲ. ಶ್ರಾವಂತಿ ಇವಳು 8 ನೇ ಆರೋಪಿಯ ಮನೆಗೆ ಹುಟ್ಟು ಹಬ್ಬಕ್ಕೆ ಹೋಗಿದ್ದು ನನಗೆ ಗೊತ್ತಿಲ್ಲ.

1 ನೇ ಆರೋಪಿ ಹಣಕಾಸಿನ ವ್ಯವಹಾರ ಮಾಡುತ್ತಾನೆ ಎಂದರೆ ಸರಿ. ಚಾಸಾ-1 ಇವರು ಕಟ್ಟಿಗೆ ವ್ಯಾಪಾರ ಮಾಡುತ್ತಾರೆ. ಶ್ರಾವಂತಿ ಇವಳ ಮದುವೆಯ ಖರ್ಚನ್ನು 1 ನೇ ಆರೋಪಿತನೇ ಮಾಡಿದ್ದಾನೆ ಎಂದರೆ ನಾವು ಹಣ ನೀಡಿದ್ದೇವೆ ಅವನು ಖರ್ಚನ್ನು ಮಾಡಿದ್ದಾನೆ ಎಂದು ಸಾಕ್ಷಿ ಉತ್ತರಿಸುತ್ತಾರೆ.

ಮದುವೆಯ ಮಾತುಕತೆ ಯಾವಾಗ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಪರವಾಗಿ ಮಾತುಕತೆಗೆ ಅವನ ಮನೆಯ ಸದಸ್ಯರನ್ನು ಬಿಟ್ಟು ಬೇರೆ ಹಿರಿಯರು ಬಂದಿದ್ದರು

ಅವರ ಹೆಸರುಗಳು ನನಗೆ ಗೊತ್ತಿಲ್ಲ. ಅವರು ಹತ್ತು ಜನ ಬಂದಿದ್ದರು. ಆ 10 ಜನರಲ್ಲಿ 1 ನೇ ಆರೋಪಿ ಒಬ್ಬ ಮಧ್ಯಸ್ತಿಕೆ ಗಾರರನ್ನು ಕರೆದುಕೊಂಡು ಬಂದಿದ್ದರು ಅವರು ವರದಕ್ಷಿಣೆಯನ್ನು ಕೇಳಿದರು. ಅವರ ಹೆಸರು ನನಗೆ ಗೊತ್ತಿಲ್ಲ. ಅವರು 10 ಲಕ್ಷ ರೂ. ಹಣ 8 ತೊಲೆ ಬಂಗಾರ ಕೊಡುವಂತೆ ಕೇಳಿದರು ನಾವು ಅಷ್ಟು ಆಗುವುದಿಲ್ಲ ಎಂದು ಹೇಳಿದ್ದೆವು. ಮದುವೆಯ ಮಾತುಕತೆ ನನ್ನ ಮನೆಯಲ್ಲಿ ಆಗಿರುತ್ತದೆ. ಮದುವೆಯ ಮಾತುಕತೆಯ ವಿವರಗಳನ್ನು ಲಿಖಿತವಾಗಿ ಬರೆಯಲಿಲ್ಲ. ನಾವು ಹೋಳಿಗೆ ಊಟ ಮಾಡಿಕೊಂಡು ಹೋದೆವು. ಮದುವೆಯ ಮಾತುಕತೆಯಲ್ಲಿ ಆದ ವಿಷಯಗಳ ಬಗ್ಗೆ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ. ಮದುವೆಯ ಬಗ್ಗೆ ಯಾವುದೇ ಮಾತುಕತೆ ಆಗಿಲ್ಲ ಆದ್ದರಿಂದ ಆ ವಿಷಯವಾಗಿ ನಾನು ಪೊಲೀಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

ಶ್ರಾವಂತಿಯ ಮದುವೆಯ ಕಾಲಕ್ಕೆ ಅವರ ತಂದೆ ತಾಯಿ ಇಬ್ಬರೂ ಮರಣ ಹೊಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ 1 ನೇ ಆರೋಪಿಯ ತಂದೆ ತಾಯಿ ಕೂಡ ಮರಣ ಹೊಂದಿದ್ದರು ಎಂದರೆ ಸರಿ. ಸೂರ್ಯ ಭವನದ ಹಣವನ್ನು 1 ನೇ ಆರೋಪಿ ನೀಡಿದ್ದಾನೆ ಎಂದರೆ ನಾವು ಕೊಟ್ಟಿದ್ದೇವೆ ಅವನು ತುಂಬಿದ್ದಾನೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಚಾಸಾ-1 ಇವರ ಆರ್ಥಿಕ ಪರಿಸ್ಥಿತಿ ಮದುವೆಯ ಸಮಯದಲ್ಲಿ ಚೆನ್ನಾಗಿ ಇರಲಿಲ್ಲ ಎಂದರೆ ಸರಿ. ಮದುವೆಯ ಆರತಕ್ಷತೆಯನ್ನು ನಾವು ಮಾಡಿಕೊಂಡಿದ್ದೇವೆ, ಮದುವೆಯನ್ನು 1 ನೇ ಆರೋಪಿಯೇ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಮದುವೆಯ ಖರ್ಚಿನ ಹಣವನ್ನು ಚಾಸಾ1 ಇವರು ಎಲ್ಲಿಂದಲೋ ತಂದು ಕೊಟ್ಟಿದ್ದರು. ಮದುವೆಯ ಖರ್ಚಿನ ಹಣವನ್ನು ಮದುವೆಗಿಂತ ಹತ್ತು ದಿನಕ್ಕಿಂತ ಮೊದಲು ನಮ್ಮ ಮನೆಯಲ್ಲಿ ಕೊಟ್ಟಿರುತ್ತೇವೆ. ಹಣ ಕೊಡುವ ಕಾಲಕ್ಕೆ ನಾನು, ಚಾಸಾ-14, 1 ನೇ ಆರೋಪಿ, ಶ್ರಾವಂತಿ ಇವರ ಅತ್ತೆ ಎಲ್ಲರೂ ಹಾಜರಿದ್ದೆವು. ಮದುವೆಯ ಕಾಲಕ್ಕೆ 1 ಬಂಗಾರದ ಉಂಗುರ ಅರ್ದ ತೊಲೆ ತೂಕದ್ದು, ಒಂದು ಚೈನು ಒಂದು ತೊಲೆ ತೂಕದ್ದು, ಬ್ರಾಸ್ ಲೆಟ್ ಅದು ಎಷ್ಟು ತೊಲೆಯದ್ದು ಎಂದು ನನಗೆ ಗೊತ್ತಿಲ್ಲ, ಇವುಗಳನ್ನು ನೀಡಿದ್ದೇವೆ. ಸದರಿ ಬಂಗಾರದ ಆಭರಣಗಳನ್ನು ಚಾಸಾ-1 ಇವರ ಸ್ನೇಹಿತನ

ಅಂಗಡಿಯಲ್ಲಿ ಖರೀದಿಸಲಾಗಿತ್ತು. ಆ ಸಮಯದಲ್ಲಿ 1 ತೊಲೆ ಬಂಗಾರಕ್ಕೆ 30 ಸಾವಿರ ರೂ. ಮೌಲ್ಯ ಇತ್ತು. ಬಂಗಾರದ ಆಭರಣಗಳನ್ನು ಖರೀದಿಸಿದಕ್ಕೆ ರಸೀದಿಗಳನ್ನು ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಬಂಗಾರದ ಉಂಗುರ, ಚೈನು, ಬ್ರಾಸ್ ಲೈಟು ಇವುಗಳಿಗೆ ಹಣ ಕೊಟ್ಟ ಬಗ್ಗೆ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಅವರು ಕೇಳಿಲ್ಲ ಆದ್ದರಿಂದ ನಾನು ಹೇಳಿಲ್ಲ ಎಂದು ಸಾಕ್ಷಿ ಉತ್ತರಿಸುತ್ತಾರೆ. ಈ ಎಲ್ಲಾ ವಿಷಯಗಳನ್ನು ಇಂದೇ ಪ್ರಥಮ ಬಾರಿಗೆ ನ್ಯಾಯಾಲಯದ ಮುಂದೆ ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯ ಮುಂದೆ ಹತ್ತು ದಿವಸ ಮೊದಲು ರೂ.2 ಲಕ್ಷ ಹಣ ಹಾಗೂ ಮದುವೆಯ ಕಾಲಕ್ಕೆ 1 ನೇ ಆರೋಪಿಗೆ ಬಂಗಾರದ ಆಭರಣಗಳನ್ನು ನೀಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯಗಳನ್ನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಅವರು ಕೇಳಿಲ್ಲ ಆದ್ದರಿಂದ ನಾನು ಹೇಳಿಲ್ಲ ಎಂದು ಸಾಕ್ಷಿ ಉತ್ತರಿಸುತ್ತಾರೆ. ನಾವು 1 ಆರೋಪಿಗೆ ರೂ.2 ಲಕ್ಷ ಹಣ ಹಾಗೂ ಬಂಗಾರದ ಆಭರಣಗಳನ್ನು ನೀಡಿಲ್ಲ ಆದ್ದರಿಂದ ಈ ವಿಷಯವನ್ನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳನ್ನು ಇಂದೇ ಪ್ರಥಮ ಬಾರಿಗೆ ನ್ಯಾಯಾಲಯದ ಮುಂದೆ ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಯಾವ ಯಾವ ಆರೋಪಿತರು ಶ್ರಾವಂತಿಗೆ ಯಾವ ಯಾವ ರೀತಿಯಲ್ಲಿ ಯಾವ ಯಾವ ದಿನಾಂಕಗಳಂದು ಹಿಂಸೆ ನೀಡಿದ್ದಾರೆ ಎಂದು ನಿಮಗೆ ಗೊತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಅವರ ಮನೆಗೆ ಹೋಗಿಲ್ಲ. ಚಾಸಾ-1 ಇವರು ಈ ಬಗ್ಗೆ ನನಗೆ ಹೇಳಿದ್ದಾರೆ ಎಂದು ಉತ್ತರಿಸುತ್ತಾರೆ. ಆರೋಪಿತರು ಶ್ರಾವಂತಿಗೆ ಹಿಂಸೆ ನೀಡಿದ ಬಗ್ಗೆ ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಆರೋಪಿತರು ಶ್ರಾವಂತಿಗೆ ಹಣ ತರುವಂತೆ ಹೇಳಿದ ವಿಷಯವನ್ನು ನಾನು ಅವಳಿಂದ ನೇರವಾಗಿ ಕೇಳಿಲ್ಲ. ಶ್ರಾವಂತಿ ಇವಳು ಆರೋಪಿತರು ತನಗೆ ಮಾನಸಿಕ ಹಿಂಸೆ ನೀಡಿದ್ದಾರೆ ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ. ಅವಳು ಯಾವ ದಿನಾಂಕದಂದು ತಿಳಿಸಿದಳು ಎಂದು ಗೊತ್ತಿಲ್ಲ. ಶ್ರಾವಂತಿ ಇವಳು ಆರೋಪಿತರು ತನಗೆ ಮಾನಸಿಕ ಹಿಂಸೆ ನೀಡಿದ್ದಾರೆ

ಎಂದು ತಿಳಿಸಿದ ನಂತರ ನಾನಾಗಲೀ ಅಥವಾ ಶ್ರಾವಂತಿ ಆಗಲಿ ಪೊಲೀಸರಿಗೆ ದೂರನ್ನು ನೀಡಿಲ್ಲ. ಆದರೆ ಪಂಚಾಯತಿ ಮಾಡಿದ್ದೇವೆ. ಈ ವಿಷಯದ ಬಗ್ಗೆ ಮಹಿಳಾ ಸಾಂತ್ವನ ಕೇಂದ್ರಕ್ಕೆ ಹಾಗೂ ಕೌಟುಂಬಿಕ ಕೇಂದ್ರಕ್ಕೆ ಹೋಗಿಲ್ಲ. ನಾನು ಹೇಳುವಂತೆ ಯಾವುದೇ ಘಟನೆ ಆಗಿಲ್ಲ ಆದ್ದರಿಂದ ನಾವು ಪೊಲೀಸರಿಗೆ ದೂರನ್ನು ನೀಡಿಲ್ಲ, ಮಹಿಳಾ ಸಾಂತ್ವನ ಕೇಂದ್ರಕ್ಕೆ ಹಾಗೂ ಕೌಟುಂಬಿಕ ಕೇಂದ್ರಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-15, 16 ಹಾಗೂ ಹಿರಿಯರು ಮತ್ತು ನಾವು ರಾಜಿ ಪಂಚಾಯತಿ ಮಾಡಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಪಂಚಾಯತಿ ಮಾಡಿದ್ದರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ನನ್ನ ಮನೆಯಲ್ಲಿ ಪಂಚಾಯತಿ ಮಾಡಿದ ಬಗ್ಗೆ ಪೊಲೀಸರಿಗೆ ನೀಡಿದ ಹೇಳಿಯಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಮನೆಯಲ್ಲಿ ಯಾವುದೇ ಪಂಚಾಯತಿ ಮಾಡಿಲ್ಲ ಆದ್ದರಿಂದ ಆ ಬಗ್ಗೆ ಪೊಲೀಸರಿಗೆ ನೀಡಿದ ಹೇಳಿಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಮೊಬೈಲ್ ಸಂಖ್ಯೆ 9731340074 ಇದು ಶ್ರಾವಂತಿ ಇವಳಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ದಿನಾಂಕ 20.11.2021 ರಂದು 1 ನೇ ಆರೋಪಿ ರೂ. 18,342 ಗಳನ್ನು ಶ್ರಾವಂತಿಗೆ ಫೋನ್ ಪೇ ಮುಖಾಂತರ ಸಂದಾಯ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 20.11.2021 ರಿಂದ ಶ್ರಾವಂತಿ ಮರಣ ಹೊಂದುವವರೆಗೂ ತನಗೆ ಬಂದ ಹಣವನ್ನು 1 ನೇ ಆರೋಪಿ ಶ್ರಾವಂತಿಯ ಖಾತೆಗೆ ಸಂದಾಯ ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಶ್ರಾವಂತಿಯೇ ಮನೆಯ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ. ಮನೆಯ ಯಜಮಾನಿಕೆಯನ್ನು ಶ್ರಾವಂತಿಯೇ ಮಾಡುತ್ತಿದ್ದಳು ಎಂದರೆ ಸರಿ. ಶ್ರಾವಂತಿ ಹಾಗೂ 1 ನೇ ಆರೋಪಿ ಬಹಳ ಅನ್ಯೋನ್ಯವಾಗಿದ್ದರು ಎಂದರೆ ಸರಿಯಲ್ಲ. ಶ್ರಾವಂತಿಯ ಹೆರಿಗೆಯ ಖರ್ಚನ್ನು 1 ನೇ ಆರೋಪಿಯೇ ನೋಡಿಕೊಂಡಿದ್ದ ಎಂದರೆ ಸರಿಯಲ್ಲ.

ಚಾಸಾ-1 ಇವರು ಕ್ರಿಕೆಟ್ ಬೆಟ್ಟಿಂಗ್ ಆಡಿ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ-1 ಇವರು ಕ್ರಿಕೆಟ್ ಬೆಟ್ಟಿಂಗ್ ಆಡಿದ್ದಕ್ಕೆ ಅವರ ಮೇಲೆ ಗಾಂಧಿನಗರ ಪೊಲೀಸ ಠಾಣೆಯಲ್ಲಿ ಹಾಗೂ ಸಿ.ಇ.ಎನ್ ಪೋಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು ಎಂದರೆ ಸರಿಯಲ್ಲ. ಚಾಸಾ-1 ಇವರು ಶ್ರಾವಂತಿಗೆ ಪದೇ ಪದೇ ಹಣ

ನೀಡುವಂತೆ ಪೀಡಿಸುತ್ತಿದ್ದ ಎಂದರೆ ಸರಿಯಲ್ಲ. ಆರೋಪಿತರು ಶ್ರಾವಂತಿಗೆ ವರದಕ್ಷಿಣೆ ಹಣ ತರುವಂತೆ ಒತ್ತಾಯ ಮಾಡಿಲ್ಲ ಮತ್ತು ಹಿಂಸೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. **ಚಾಸಾ-1** ಇವರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದು ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರಾವಂತಿಯ ಸಾವಿಗೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.